# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-03

Cw-10

| | |
|---|---|
| ಸಾಕ್ಷಿದಾರರ ಹೆಸರುಃ | ಗುತ್ತಮ್ಮ |
| ತಂದೆಃಗಂಡನ ಹೆಸರುಃ | ದಿನೇಶ |
| ವಯಸ್ಸುಃ | 34 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:29.08.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಮೃತ ಗಣೇಶ ನನ್ನ ಮಗ. ಮೃತ ನಿಂಗಪ್ಪ ನನ್ನ ಸಹೋದರ. ಆರೋಪಿಗಳು ಗೊತ್ತು. ನನ್ನ ಮಗ ಗಣೇಶ ನನ್ನ ತಮ್ಮ ನಿಂಗಪ್ಪನ ಜೊತೆಯಲ್ಲಿರುತ್ತಿದ್ದನು. ನನ್ನ ಮಗ ಸ್ವಾಮೇರ ಗೋಡಾನ್ ನಲ್ಲಿ ನಿಂಗಪ್ಪನ ಜೊತೆ ಮಲಗುತ್ತಿದ್ದ.

ಈಗ್ಗೆ 2½ ವರ್ಷಗಳ ಹಿಂದೆ ನನ್ನ ಮಗ ಗಣೇಶ, ನಿಂಗಪ್ಪನ ಜೊತೆ ಗೋಡಾನ್ ನಲ್ಲಿ ಮಲಗಿದ್ದ. ಗಣೇಶ ಮತ್ತು ನಿಂಗಪ್ಪ ರಾತ್ರಿ ಮಲಗಿದ್ದಾಗ ಆರೋಪಿಗಳು ರಾಡು, ಪಾನ, ಡಂಬಲ್ಸ ನಿಂದ ಹೊಡೆದು ಕೊಲೆ ಮಾಡಿದ್ದಾರೆ ಅಂತಾ ಮಾರನೇ ದಿನ ಬೆಳಿಗ್ಗೆ ನನಗೆ ಗೊತ್ತಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ಪೊಲೀಸರು ನನ್ನ ಹೇಳಿಕೆ ತೆಗೆದುಕೊಂಡಿದ್ದಾರೆ. ಪೊಲೀಸ್ ಠಾಣೆಯಲ್ಲಿ, ಸ್ಥಳದಲ್ಲಿ ನನ್ನ ಹೇಳಿಕೆ ತೆಗೆದುಕೊಂಡಿದ್ದಾರೆ. ನನ್ನ ಗಂಡನ ಊರು ಕುಂದಾಪುರ. ನಾನು ಕೂಲಿ ಕೆಲಸ

ಮಾಡುತ್ತೇನೆ. ನನಗೆ 07 ಜನ ಮಕ್ಕಳು. ಮೃತ ಗಣೇಶ 4 ನೇಯವನು. ನಾನು, ನನ್ನ ಮಕ್ಕಳು ಎಲ್ಲರೂ ಒಂದೇ ಮನೆಯಲ್ಲಿರುತ್ತೇವೆ. ಯಾರು ಹೊಡೆದಿದ್ದಾರೆ ಎಂದರೆ ಆರೋಪಿಗಳು ಹೊಡೆದಿದ್ದಾರೆ ಅಂತಾ ಅವರೇ ಹೇಳಿರುತ್ತಾರೆ.

ಕೊಲೆಯಾಗುವುದಕ್ಕಿಂತ ಮೊದಲು ಆರೋಪಿಗಳನ್ನು ನಾನು ನೋಡಿದ್ದೇನೆ. ಅವರ ಅಡ್ರೆಸ್ ಗೊತ್ತಿಲ್ಲ. ಪೊಲೀಸರು ಹೇಳಿದ ಮೇಲೆ ಗೊತ್ತಾಯಿತು ಅಂತಾ ಹೇಳಿಕೆ ಕೊಟ್ಟಿದ್ದೇನೆಂದರೆ ಸರಿಯಲ್ಲ. ನಾನು ಹೋಗುವಷ್ಟರಲ್ಲಿ ಬಹಳಷ್ಟು ಜನ ಸೇರಿದ್ದರು, ಅವರ ಹೆಸರು ಗೊತ್ತಿಲ್ಲ. ನಾನು ಹೋದ ನಂತರ ಪೊಲೀಸರು ಬಂದರು. ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ.

ಮನೆಯಲ್ಲೇ ಮಲಗು ಅಂತಾ ನನ್ನ ಮಗನಿಗೆ ಹೇಳುತ್ತಿದ್ದೆ. ನಿಂಗಪ್ಪ ಮತ್ತು ನನ್ನ ಮಗ ಗಣೇಶ ಉಡಾಳರಿದ್ದರು ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಈ ಕೊಲೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬೇರೆಯವರು ಮಾಡಿದ ಕೊಲೆಯನ್ನು ಆರೋಪಿತರ ಮೇಲೆ ಹಾಕಿ ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಆರೋಪಿತರನ್ನು ಎಂದೂ ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.